

# ಹಾಂಗ್ ಸನ್ ಡೂಂಗ್

## ಭೂಗರ್ಭದಲ್ಲೊಂದು ಬೆರಗಿನ ಜಗ

ಸಮುದ್ರದೊಳಗೊಂದು ಬೇರೆಯದೇ ಜಗವಿರುವುದು ನಮಗೆ ಗೊತ್ತು. ಆದರೆ ಭೂಮಿಯ ಗರ್ಭದೊಳಗೇ ಇರುವ ವಿಸ್ಮಯದ ಜಗತ್ತಿನ ಬಗ್ಗೆ ಅಷ್ಟಾಗಿ ಗೊತ್ತಿಲ್ಲ. ಗುಹೆಯೆಂದರೆ ಕಗ್ಗತ್ತಲಿನ ಸುರಂಗವಷ್ಟೇ ಎಂದುಕೊಂಡವರಿಗೆ ವಿಯೆಟ್ನಾಂ ದೇಶದ 'ಫೋಂಗ್ ನಾ-ಕೆ ಬಾಂಗ್' ಅಭಯಾರಣ್ಯದಲ್ಲಿರುವ ಹಾಂಗ್ ಸನ್ ಡೂಂಗ್ ಗುಹೆ ವಿಸ್ಮಯದ ಜಗತ್ತನ್ನೇ ತೆರೆದಿಡುತ್ತದೆ. ಇದು ಪ್ರವಾಸಿಗರಿಗೂ ಸಂಶೋಧಕರಿಗೂ ಮುಗಿಯದ ಬೆರಗಿನ ಖನಿ.

**ಚೈತ್ರಿಕಾ ನಾಯ್ಕ ಹರ್ಗಿ**

ಗುಹೆಗಳ ಉಲ್ಲೇಖದ ಪರಿಚಯ ನಮಗೆ ಬಾಲ್ಯದಲ್ಲೇ ಆರಂಭವಾಗುತ್ತದೆ. ಋಷಿಮುನಿಗಳ ತಪಸ್ಸಿನ ಸ್ಥಳಗಳಾಗಿ ಹಾಗೂ ಮೊಲ–ಸಿಂಹದ ‘ಪಂಚತಂತ್ರ’ ಕಥೆಗಳಲ್ಲಿ ಬೆರಗು ಹುಟ್ಟಿಸುವ ತಾಣಗಳಾಗಿ ಗುಹೆಗಳು ಬಾಲ್ಯಕಾಲವನ್ನು ಎದುರುಗೊಳ್ಳುತ್ತವೆ. ನಂತರ ಇತಿಹಾಸ ಓದಲಾರಂಭಿಸಿದಾಗ, ಶಿಲಾಯುಗದ ಮಾನವನ ವಾಸಸ್ಥಾನವಾಗಿ ಗುಹೆಗಳ ಜಗತ್ತು ಪರಿಚಯವಾಗುತ್ತದೆ.

ಪಂಚತಂತ್ರ ಕಥೆಗಳಲ್ಲಿ ಕಾಡಿನ ರಾಜ ಸಿಂಹ ಯಾವಾಗಲೂ ಗುಹೆ ಒಳಗೆ ಇರುವ, ಘನಗಾಂಭಿರ್ಯದಿಂದ ಗುಹೆಯ ಬಾಗಿಲಿಗೆ ಬಂದು ಕಾಡಿನ ಇತರ ಪ್ರಾಣಿಗಳೊಂದಿಗೆ ಸಭೆ ನಡೆಸುವ ಚಿತ್ರಣದ ಕಲ್ಪನೆ ಕಣ್ಣಿಗೆ ಕಟ್ಟುತ್ತದೆ. ಇಂತಹ ನಿಗೂಢ ಗುಹೆಗಳೊಳಗೆ ನಾಲ್ಕೈದು ದಿನಗಟ್ಟಲೆ ಸಾಹಸಮಯ ಪ್ರವಾಸ ಕೈಗೊಳ್ಳುವುದೆಂದರೆ? ಆ ಕಲ್ಪನೆಯೇ ಬೆರಗುಗೊಳಿಸುತ್ತದೆ. ಹೀಗೆ ಪ್ರವಾಸಕ್ಕೆ ಹೋಗಬಹುದಾದ ಅನೇಕ ಗುಹೆಗಳು ಜಗತ್ತಿನಲ್ಲಿವೆ. ಅದರಲ್ಲೂ ಜಗತ್ತಿನ ಅತೀ ದೊಡ್ಡ ಗುಹೆ ಎಂದು ಕರೆಸಿಕೊಳ್ಳುವ ವಿಯೆಟ್ನಾಂ ದೇಶದ ಫೋಂಗ್ ನಾ–ಕೆ ಬಾಂಗ್ ಅಭಯಾರಣ್ಯದಲ್ಲಿರುವ ಹಾಂಗ್ ಸನ್ ಡೂಂಗ್ ಗುಹೆ ಬೇರೆಯದೇ ಜಗತ್ತನ್ನು ತೆರೆದಿಡುತ್ತದೆ. ಇದರ ಸುತ್ತ ಪರ್ವತಶ್ರೇಣಿಯಿದೆ, ಹೊಟ್ಟೆಯೊಳಗೆ ಕಾಡಿದೆ, ನದಿಯಿದೆ, ಹೆಬ್ಬಂಡೆಗಳಿವೆ.

ಆದ್ದರಿಂದಲೇ ‘ಮೌಂಟೇನ್ ರಿವರ್ ಕೇವ್’ (ಪರ್ವತ ನದಿ ಗುಹೆ) ಅಂತಲೂ ಇದನ್ನು ಕರೆಯುತ್ತಾರೆ. ಮಳೆ ಕಾಡುಗಳ ಥ್ರೌಂಗ್ ಪರ್ವತ ಶ್ರೇಣಿ, ಅದರ ಇಳಿಜಾರಿನಲ್ಲಿ ಹರಿಯುವ ರೋ (ಥೌಂಗ್) ಥುವಾಂಗ್ ನದಿ, ಗುಹೆಗಳ ಸಾಮ್ರಾಜ್ಯದಂತಿರುವ ಸುತ್ತಲಿನ ಪ್ರದೇಶ, ಇವೆಲ್ಲಾ ತುಂಬಾ ವಿಶಿಷ್ಟವಾದ್ದರಿಂದ ಫೋಂಗ್ ನಾ–ಕೆ ಬಾಂಗ್ ಅಭಯಾರಣ್ಯ ಯುನೆಸ್ಕೊ ಪಟ್ಟಿಯಲ್ಲಿ ಸೇರಿಕೊಂಡಿದೆ. ಅದರ ಎದೆ ಭಾಗದಲ್ಲಿ ಈ ಗುಹೆಯಿದೆ.

1990ರಲ್ಲಿ ಹೋ ಖಾನ್ಹ್ ಎಂಬ ಸ್ಥಳೀಯ ರೈತನೊಬ್ಬ ಮನೆ ಕಟ್ಟಲು ಬೇಕಾದ ಮರಮಟ್ಟಿಗೋಸ್ಕರ ಹುಡುಕುತ್ತಿದ್ದಾಗ ಗುಹೆಯ ಬಾಯನ್ನು ಅಕಸ್ಮಾತ್ ಆಗಿ ಗಮನಿಸಿದ. ಗುಹೆಯೊಳಗೆ ಹರಿಯುವ ನೀರಿನ ಜುಳು ಜುಳು ಸದ್ದು ಆಲಿಸಿದ. ಇದಾದ ನಂತರ ಹೋ ಖಾನ್ಹ್ ತನ್ನ ಅಕ್ಕಪಕ್ಕದ ಜನರಲ್ಲಿ, ಸುತ್ತಮುತ್ತಲಿನ ಹಳ್ಳಿಗರಲ್ಲಿ ತನ್ನ ಅನುಭವ ಹೇಳಿಕೊಳ್ಳುತ್ತಿದ್ದ. ಆದರೆ ಇಳಿಜಾರಿನ ಪ್ರದೇಶ, ಅಲ್ಲಿನ ವಾತಾವರಣದ ಕಾರಣದಿಂದ ಗುಹೆಯೊಳಗೆ ಪ್ರವೇಶಿಸಲು ಸಾಧ್ಯವಾಗಲಿಲ್ಲ.

ಈ ಅಭಯಾರಣ್ಯದ ಇನ್ನೊಂದು ವೈಶಿಷ್ಟ್ಯ ಏನೆಂದರೆ, ಸುಣ್ಣದ ಕಲ್ಲುಗಳಿಂದ ಆವೃತವಾದ ಜಗತ್ತಿನ ಅತಿದೊಡ್ಡ ಪ್ರದೇಶ ಇದು. ಗುಹೆ ನಿರ್ಮಾಣವಾಗಲು ಸುಣ್ಣದ ಕಲ್ಲು ಮುಖ್ಯವಾದ್ದರಿಂದ ಇದು ಅತಿ ಹೆಚ್ಚು ಗುಹೆಗಳಿರುವ ತಾಣ ಕೂಡ ಹೌದು. ಆದ್ದರಿಂದ ಗುಹೆ ಸಂಶೋಧಕರಿಗೆ ಇದು ನೆಚ್ಚಿನ ತಾಣ. 1990ರ ಸಮಯದಲ್ಲಿ ವಿಯೆಟ್ನಾಂ ಆದ್ಯಂತ ‘ಬ್ರಿಟಿಷ್



